

ಕಲೆ: ಎಸ್.ವಿ. ಹೂಗಾರ್

**ನಾಂದಿಪದ**

# ಕಾವ್ಯದ ಗೆಜ್ಜೆ ಹೊಸ ಹೆಜ್ಜೆ

ವಿಶ್ವದ ವಿವಿಧ ಭಾಗಗಳ ಕಾವ್ಯವನ್ನು, ಅದರಲ್ಲೂ ಮಹಿಳಾಕಾವ್ಯದ ಬಿಂಬಗಳನ್ನು ಕನ್ನಡದ ಕನ್ನಡಿಯಲ್ಲಿ ಕಾಣಿಸುವ ಮಹತ್ವಾಕಾಂಕ್ಷೆಯ ಪ್ರಯತ್ನವಾದ ‘ಕಾವ್ಯಸಂಕ’ ಮಾಲಿಕೆ ಈ ಸಂಚಿಕೆಯಿಂದ ಆರಂಭಗೊಳ್ಳುತ್ತಿದೆ. ಹೊಸ ವರ್ಷದ ಮುನ್ನುಡಿಗೆ, ಹೊಸತರ ಹಂಬಲಕ್ಕೆ ಕಾವ್ಯವನ್ನು ಒಳಗೊಳ್ಳುವುದಕ್ಕಿಂತಲೂ ಮಿಗಿಲಾದುದು ಏನಿದೆ? ಮನಸ್ಸನ್ನು ಹದ ಹಾಗೂ ಆರ್ದ್ರಗೊಳಿಸುವ ಕಾವ್ಯವನ್ನು ಕೇಂದ್ರವಾಗಿರಿಸಿಕೊಂಡು ಮಯೂರದ ಹೊಸ ವರ್ಷದ ಪಯಣ ಆರಂಭಗೊಂಡಿದೆ. ಬೇರೆ ಬೇರೆ ಕಾವ್ಯಜಗತ್ತು ಮತ್ತು ಕವಿಗಳ ಕುರಿತು ಕನ್ನಡದ ಕಾವ್ಯಪ್ರೇಮಿಗಳ ಗಮನಸೆಳೆಯುವುದು ಈ ಮಾಲಿಕೆಯ ಉದ್ದೇಶ.

‘ಕಾವ್ಯಸಂಕ’ಕ್ಕೆ ಜುಗಲಬಂದಿಯಂತೆ ಮತ್ತಷ್ಟು ಅನುವಾದಿತ ಕವಿತೆಗಳು ಈ ಸಂಚಿಕೆಯಲ್ಲಿವೆ; ಅವು ಹೊಸ ವರ್ಷದ ಸಂಚಿಕೆಗೆ ಕಾವ್ಯಸ್ಪರ್ಶವನ್ನು ನೀಡಿವೆ. ಕಾವ್ಯದ ಈ ಗುಂಗು ಸಹೃದಯರಲ್ಲೂ ಹೊಸ ಹುಮ್ಮಸ್ಸು ಮೂಡಿಸುತ್ತದೆನ್ನುವ ನಿರೀಕ್ಷೆ ನಮ್ಮದು.

ಮಕ್ಕಳಿಗಾಗಿ ಬರೆಯುವುದನ್ನು ವ್ರತದಂತೆ ಪಾಲಿಸಿಕೊಂಡು ಬರುತ್ತಿರುವ ಹಿರಿಯ ಸಾಹಿತಿ ಆನಂದ ಪಾಟೀಲರ ಸಂದರ್ಶನ ಈ ಸಂಚಿಕೆಯ ವಿಶೇಷಗಳಲ್ಲೊಂದು. ಮಕ್ಕಳ ಸಾಹಿತ್ಯದ ಆಗುಹೋಗುಗಳನ್ನು ಚರ್ಚಿಸುವ ಈ ಮಾತುಕತೆ, ಬರವಣಿಗೆಯಲ್ಲಿ ತೊಡಗಿಕೊಂಡಿರುವ ಎಲ್ಲರಿಗೂ ಅವರು ಗಂಭೀರವಾಗಿ ಪರಿಗಣಿಸದಿರಬಹುದಾದ ಸಾಹಿತ್ಯಿಕ–ಸಾಂಸ್ಕೃತಿಕ ಹೊಣೆಗಾರಿಕೆಯೊಂದನ್ನು ನೆನಪಿಸುತ್ತಿದೆ. ಎಳೆಯರಿಗೆ ಓದುವ ರುಚಿ ಹತ್ತಿಸುವುದು ಸಾಹಿತ್ಯದ ಅಂಗಳದಲ್ಲಿರುವ ಎಲ್ಲರ ಹೊಣೆಗಾರಿಕೆ ಎನ್ನುವುದನ್ನು ಆನಂದ ಪಾಟೀಲರ ಕೃತಿಗಳ ಜೊತೆಗೆ ಅವರ ಬದುಕಿನ ದಾರಿಯೂ ಸಹೃದಯರಿಗೆ ಮನವರಿಕೆ ಮಾಡಿಕೊಡುವಂತಿದೆ.

ಬದುಕಿನ ಸಾಧ್ಯತೆ ಮತ್ತು ಸೌಂದರ್ಯ ಹೆಚ್ಚಿಸಿಕೊಳ್ಳಲಿಕ್ಕಾಗಿ ಹೊಸ ವರ್ಷದ ಸಂದರ್ಭದಲ್ಲಿ ಗುರಿಯೊಂದನ್ನು ಗೊತ್ತುಪಡಿಸಿಕೊಳ್ಳುವ ಅಭ್ಯಾಸ ಅನೇಕರಿಗಿದೆ. ಕನ್ನಡಿಗರ ಹೊಸ ವರ್ಷದ ಸಂಕಲ್ಪಗಳಲ್ಲಿ ‘ವರ್ಷದುದ್ದಕ್ಕೂ ಓದು–ಬರಹ–ವಿಮರ್ಶೆ’ ಸೇರಿಕೊಂಡಿರಲಿ, ಆ ಮೂಲಕ ‘ಕನ್ನಡ ವಿವೇಕ’ ವಿಸ್ತರಿಸಲಿ ಎನ್ನುವ ಆಶಯದೊಂದಿಗೆ, ಎಲ್ಲ ಸಹೃದಯರಿಗೆ ಹೊಸ ವರ್ಷದ ಶುಭಾಶಯಗಳು.

**ಮಯೂರ ಬಳಗ**
editormy@mayura.co.in